



ಚಂದದ ಹೂಗಳ ಸ್ವಾಗತಕಾರಣಿಯಾಗಿಯೂ ಔಷಧೀಯ ಗುಣಗಳ ಆಗರವಾಗಿಯೂ ನಂದಿಬಟ್ಟಲು ಎಲ್ಲರ ಮನೆಯಂಗಳದಲ್ಲಿ ಇರಬೇಕಾದ ಗಿಡ.

■ ಸಂತೋಷ್ ರಾವ್ ಪೆರ್ಮುಡ

# ಬಹುಚಂದ ನಂದಿಬಟ್ಟಲು

ನಂದಿಬಟ್ಟಲು – ಹೆಸರಿನಷ್ಟೇ, ಆ ಹೆಸರಿನ ಹೂವೂ ಚಂದ. ಹಸಿರೆಲೆಗಳ ಮರೆಮಾಚುವಷ್ಟು ಬೆಳದಿಂಗಳಿನ ತುಣುಕುಗಳಂಥ ಹೂಗಳು ಬಿಟ್ಟಾಗ ಆ ನೋಟವೇ ಆನಂದ. ಬರೀ ಆಹ್ಲಾದಕ್ಕಷ್ಟೇ ಅಲ್ಲ, ಔಷಧೀಯ ಗುಣಗಳಿಂದಲೂ ನಂದಿಬಟ್ಟಲು ಬಹುಚಂದಬಟ್ಟಲೇ!

ಈ ಸಸ್ಯವು 'ಅಪ್ರೋಸೈನೇಸೀ' ಕುಟುಂಬಕ್ಕೆ ಸೇರಿದ ಸಸ್ಯ. 'ಟ್ಯಾಬರ್ನೀಮಾಂಟಾನ ಕಾರೊನೇರಿಯ' ಇದರ ವೈಜ್ಞಾನಿಕ ಹೆಸರು. ಇದರ ಮತ್ತೊಂದು ಹೆಸರು 'ಎರ್ವಟಾಮಿಯ'. ಇದು ವರ್ಷಪೂರ್ತಿ ಹೂವನ್ನು ಬಿಡುತ್ತದೆ. ಇದರ ಹಣ್ಣು ಫಾಲಿಕಲ್ ಮಾದರಿಯಿದ್ದು, ಉದ್ದ ಮತ್ತು ಡೊಂಕಾಗಿರುತ್ತದೆ. ಹಣ್ಣಿನ ತಿರುಳು ಕೆಂಪು ಬಣ್ಣದಿಂದ ಕೂಡಿದ್ದು ಇದರಲ್ಲಿ 36 ಬೀಜಗಳಿರುತ್ತವೆ. ಈ ಗಿಡಕ್ಕೆ 'ರಂಜಬಟ್ಟಲು' ಎಂಬ ಹೆಸರೂ ಇದೆ.

ಈ ಹೂವು ಹಲವು ಔಷಧೀಯ ಗುಣಗಳನ್ನು ಹೊಂದಿದೆ. ಹೂವಷ್ಟೇ ಅಲ್ಲದೆ ಇದರ ಬೇರು, ಎಲೆಯೂ ಔಷಧೀಯ ಗುಣದಿಂದ ಸಂಪದ್ಭರಿತವಾಗಿದೆ. ಇದರ ಬೇರು ಉರಿಯನ್ನು ಶಮನಗೊಳಿಸುವ ವಿಶಿಷ್ಟ ಸತ್ವವನ್ನು ಹೊಂದಿದೆ.

## ಔಷಧೀಯ ಗುಣಗಳು

ಕಣ್ಣಿನ ರೋಗಕ್ಕೆ ನಂದಿಬಟ್ಟಲುರಾಮಬಾಣವಾಗಿದ್ದು, ಅಧಿಕ ರಕ್ತಭೇದಿಗೆ ಹೂವನ್ನು ಜೀರಿಗೆ ಮತ್ತು ಕಲ್ಲುಸಕ್ಕರೆಯ ಜೊತೆಗೆ ಅರೆದು ಹಾಲಿನೊಂದಿಗೆ ಸೇವಿಸಿದರೆ ಶಮನವಾಗುತ್ತದೆ. ಗಾಯಗಳ ಮೇಲೆ ಇದರ 78 ಎಲೆಗಳಿಗೆ ಕರ್ಪೂರ ಸೇರಿಸಿ ಅರೆದು ಅದನ್ನು ಕ್ರೀಮ್ ಮಾಡಿ ಲೇಪಿಸಬೇಕು. ಜಂತುಹುಳದ ಬಾಧೆಗೆ ನಂದಿಬಟ್ಟಲುಎಲೆಗಳ ರಸಕ್ಕೆ ಸ್ವಲ್ಪ ಹಿಂಗು ಸೇರಿಸಿ ಕುಡಿಯಬೇಕು. ಕಣ್ಣು ಕೆಂಪಾಗಿದ್ದರೆ ಹೂವಿನ ಮೊಗ್ಗನ್ನು ಬಟ್ಟೆಯಲ್ಲಿ ಕಟ್ಟಿ ಹಾಲಿನಲ್ಲಿ ಅಥವಾ ಎಳನೀರಿನಲ್ಲಿ ಮುಳುಗಿಸಿಟ್ಟು, ನಂತರ ಆ ಹಾಲನ್ನು ಕಣ್ಣಿಗೆ ಹಿಂಡಿದರೆ ಗುಣವಾಗುತ್ತದೆ. ಹಲ್ಲು ನೋವಿರುವವರು ಗಿಡದ ಬೇರು ಅಥವಾ ಬೇರಿನ ಹೊರ ತೊಗಟೆಯನ್ನು ಬಾಯಲ್ಲಿ ಹಾಕಿಕೊಂಡು ಜಗಿದರೆ ನೋವು ಶಮನವಾಗುತ್ತದೆ. ಇಸುಬು, ದದ್ದು ಮುಂತಾದ ಚರ್ಮ ವ್ಯಾಧಿಗಳಿಗೆ ಈ ಹೂವನ್ನು ಅರೆದು ರಸವನ್ನು ಲೇಪಿಸಬೇಕು.

20 ಗ್ರಾಂ ತಾಜಾ ಹೂವುಗಳು, 20 ಗ್ರಾಂ ಹಸುವಿನ ಬೆಣ್ಣೆ ಮತ್ತು ಎರಡು ಚಿಟಕಿ ಪಚ್ಚೆ ಕರ್ಪೂರ ಸೇರಿಸಿ ನುಣ್ಣಗೆ ಅರೆದು ಭರಣಿಯಲ್ಲಿ ಶೇಖರಿಸಿಟ್ಟು ಪ್ರತಿನಿತ್ಯ ನಾಲ್ಕೈದು ಬಾರಿ ಕಣ್ಣುಗಳಿಗೆ ಅಂಜನವಿಟ್ಟರೆ ಕಣ್ಣಿನ ಪೊರೆ ಸಮಸ್ಯೆ ಪರಿಹಾರವಾಗುತ್ತದೆ. ಸ್ತ್ರೀಯರ 'ಮೆನೋಪಾಸ್' ಸಮಯದ ಅನೇಕ ಸಮಸ್ಯೆಗಳಿಗೆ ನಂದಿಬಟ್ಟಲುಪರಿಹಾರ ನೀಡುತ್ತದೆ. ನಿದ್ರಾಹೀನತೆ ತೊಂದರೆಯುಳ್ಳವರು ಗಿಡದ ರಸವನ್ನು ಸೇವಿಸಿದರೆ ನಿದ್ರೆ ಬರುತ್ತದೆ. ಗರ್ಭಕೋಶದ ತೊಂದರೆಯಿಂದ ಆಗಾಗ ಗರ್ಭಪಾತವಾಗುತ್ತಿದ್ದರೆ ಯಾ ಗರ್ಭದಾರಣೆ ತಡವಾಗುತ್ತಿದ್ದರೆ ಋತುಸ್ರಾವದ ನಾಲ್ಕನೇ ದಿನದಿಂದ ಏಳನೇ ದಿನಗಳವರೆಗೆ ಪ್ರತಿದಿನ ರಾತ್ರಿ ಐದು ತಾಜಾ ನಂದಿಬಟ್ಟಲುಎಲೆಗಳನ್ನು ಎರಡು ಚಮಚೆ ಕೆಂಪು ಅಕ್ಕಿಯೊಂದಿಗೆ ನುಣ್ಣಗೆ ಅರೆದು, ಹಸುವಿನ ತುಪ್ಪ ಮತ್ತು ಜೇನು ತುಪ್ಪ ಬೆರೆಸಿ ಸೇವಿಸಬೇಕು. ಹೀಗೇ ಮೂರು ತಿಂಗಳ ಕಾಲ ಮುಟ್ಟಾದ ನಾಲ್ಕನೇ ದಿನದಿಂದ ಏಳನೇ ದಿನಗಳವರೆಗೆ ಸೇವಿಸಬೇಕು.

ನಂದಬಟ್ಟಲದ ಬೇರನ್ನು ನೀರಿನೊಂದಿಗೆ ತೇಯ್ದು ಗಿಡಗಳಿಗೆ ಸಾವಯವ ಕ್ರಿಮಿನಾಶಕವಾಗಿ ಬಳಸುತ್ತಾರೆ. ನಿಂಬೆರಸದೊಂದಿಗೆ ಬೆರೆಸಿದ ಇದರ ಬೇರಿನ ರಸದ ಲೇಪ ಕಣ್ಣುಗುಡ್ಡೆಯ ಪಾರದರ್ಶಕ ಪಟಲದ ಮಬ್ಬನ್ನು ನಿವಾರಿಸುತ್ತದೆ. ಇದರ ಹೂವಿನ ರಸದಿಂದ ಕಾಡಿಗೆಯನ್ನು ತಯಾರಿಸುತ್ತಾರೆ. ಇದರ ಬೀಜದ ಸುತ್ತಲಿರುವ ಕೆಂಪು ತಿರುಳನ್ನು ಬಟ್ಟೆಗಳಿಗೆ ನೈಸರ್ಗಿಕ ಬಣ್ಣ ಹಾಕಲು ಬಳಸಲಾಗುತ್ತದೆ. ಈ ಗಿಡವನ್ನು ಧೂಪ ಮತ್ತು ಸುಗಂಧದ್ರವ್ಯ ತಯಾರಿಕೆಯಲ್ಲಿ ಬಳಸುತ್ತಾರೆ. ಮೂಗು ಮತ್ತು ಬಾಯಲ್ಲಿ ರಕ್ತ ಒಸರುತ್ತಿದ್ದರೆ, 2 ಚಮಚ ಜೀರಿಗೆ, 2 ಚಮಚ ಸಕ್ಕರೆ, 2 ಹೂವು ಮತ್ತು 2 ಚಮಚ ಆಕಳ ಹಾಲು ಸೇರಿಸಿ ನುಣ್ಣಗೆ ಅರೆದು, ಅದನ್ನು ಚೆನ್ನಾಗಿ ಸೋಸಿ ದಿನದ ಎರಡು ಹೊತ್ತೂ ಒಂದೊಂದು ಚಮಚ ಸೇವಿಸಬೇಕು. ಇದೇ ರೀತಿ 7 ದಿನಗಳು ಮಾಡಬೇಕು. ಒಂದು ಹಿಡಿ ಇದರ ಎಲೆಗಳನ್ನು ನುಣ್ಣಗೆ ಅರೆದು 5 ಗ್ರಾಂ ಆರತಿಯ ಕರ್ಪೂರದೊಂದಿಗೆ ಮಿಶ್ರಣ ಮಾಡಿ ಗಾಯಗಳಿಗೆ ಲೇಪಿಸಿ ಶುಭ್ರವಾದ ಬಟ್ಟೆ ಕಟ್ಟಬೇಕು.

ಈ ಗಿಡವನ್ನು ಮನೆಯಂಗಳದ ಹೂ ತೋಟದಲ್ಲಿ ಅಥವಾ ಟೆರೇಸ್ ಗಾರ್ಡನ್‌ನಲ್ಲಿ ದೊಡ್ಡ ಕುಂಡಗಳಲ್ಲೂ ಬೆಳೆಸಬಹುದು. ■